ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ನ್ಯಾಯಾಲಯ, ಕೆ.ಆರ್.ನಗರ
ಸಿ.ಸಿ. ನಂ. 504/2015

ಸಾಕ್ಷಿಯ ಹೆಸರು ಸುರೇಶ್
ತಂದೆ।ಗಂಡ ಹೆಸರು ಬೊಮರಾಯಿಗೌಡ
ವಯಸ್ಸು 53 ವರ್ಷ
ಉದ್ಯೋಗ ವ್ಯವಸಾಯ ಪ್ರಾಸಾಃ 6
ವಾಸ ಸ್ಥಳ ರಾಮಪುರ ಚಾಸಾಃ 6

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು,
ದಿನಾಂಕ ಃ 19-12-2017.

ಮುಖ್ಯ ವಿಚಾರಣೆ ಮಾನ್ಯ ಎಪಿಪಿರವರಿಂದಃ-

ನನಗೆ ಆರೋಪಿತರ ಪರಿಚಯ ಇದೆ. ಚಾಸಾ 1 ರಿಂದ 4 ರ ಪರಿಚಯ ನನಗೆ ಇದೆ. ಆರೋಪಿತರ ಮತ್ತು ಪಿರ್ಯಾದುದಾರರ ನಡುವೆ ಏನು ಗಲಾಟೆ ನಡೆಯಿತು ಎಂದು ನನಗೆ ಗೊತ್ತಿರುವುದಿಲ್ಲ, ಆರೋಪಿತರು ಮತ್ತು ಪಿರ್ಯಾದುದಾರರು ಮತ್ತು ನಾನು ರಾಮಪುರ ಗ್ರಾಮಸ್ಥರು. ಅರೋಪಿತರು ಮತ್ತು ಪಿರ್ಯಾದುದಾರರು ಅಕ್ಕಪಕ್ಕ ಮನೆಯವರು. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ, ಸಾಕ್ಷಿಗೆ ಸ್ಥಳ ಮಹಜರ್‌ನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಒಪ್ಪಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ನಮ್ಮ ಊರಿನಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ತೀರ್ಮಾನಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿರವರು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.

ಪಾಟೀಸವಾಲು. ಮಾನ್ಯ ಎಪಿಪಿರವರಿಂದ,

ದಿಃ 26-09-2014 ರಂದು ಚಾಸಾ 2 ಮತ್ತು 3 ಆರೋಪಿಗಳ ಮನೆ ಮುಂದೆ ನಡೆದುಕೊಂಡು ಹೋಗುವಾಗ ಆರೋಪಿತರೆಲ್ಲಾ ಸೇರಿ ಇಲ್ಲಿ ಏಕೆ ನಡೆದುಕೊಂಡು ಹೋಗುತ್ತಿದ್ದೀರಾ ಎಂದು ಬೋಳಿ ಮುಂಡೆ, ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ, ಸುಕನ್ಯ ನಿಂಗಮ್ಮಳನ್ನು ಹಿಡಿದುಕೊಂಡು ಗೋಡೆಗೆ ದಬ್ಬಿರುತ್ತಾರೆ ನಿಂಗಮ್ಮಳಿಗೆ ಗಾಯ ಅಗಿರುತ್ತದೆ ಎಂದರೆ

ನನಗೆ ಗೊತ್ತಿಲ್ಲ. ಮಂಜುನಾಥ ನಿಂಗಮ್ಮಳ ಊರುಗೋಲು ಕಿತ್ತುಕೊಂಡು ಅವರ ಎಡತಡೆಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಘಟನೆಯನ್ನು ನಾನು ಖುದ್ದಾಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಂತರ 02-10-2014 ರಂದು ಘಟನಾ ಸ್ಥಳಕ್ಕೆ ಪೋಲೀಸರು ಬಂದರು. ಆಗ ಚಾಸಾ 1 ನಾರಾಯಣಗೌಡ ಪೋಲೀಸರಿಗೆ ಸ್ಥಳ ತೋರಿಸಿದ್ದು ನನ್ನ ಮತ್ತು ಚಾಸಾ 5 ರವರ ಸಮಕ್ಷಮ ಪೋಲೀಸರು ಮದ್ಯಾಹ್ನ 2-15 ರಿಂದ 3 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆ ತಯಾರಿಸಿ ಪಂಚನಾಮೆ ಕಾಲದಲ್ಲಿ ಮು.ಮಾ 1 ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ನಾನು ಸ್ಥಳ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಪೋಲೀಸರು ನಮ್ಮ ಊರಿಗೆ ಬಂದಿದ್ದರು ಬೀಟಿಗೆ ಬಂದಿರುತ್ತೇವೆ ಎಂದು ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಾನು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ದಿಃ 02-10-2014 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು. ಎಲ್ಲಾ ವಿಷಯು ಗೊತ್ತಿದ್ದರೂ ಆರೋಪಿತರು ನಮ್ಮ ಗ್ರಾಮಸ್ಥರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಓ.,

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.